# ಗೋಡೆಯ ಚಿತ್ರ

■ ಹಳೆಮನೆ ರಾಜಶೇಖರ
ಕಲೆ: ರಾಮಕೃಷ್ಣ ಸಿದ್ರಪಾಲ

ಶಿಲ್ಪಾ ಎದ್ದವಳೆ ಸಮಯ ನೋಡಲೇ ಇಲ್ಲ. ಆಕೆಯ ಗುರುಗಳಾದ ಪಂಡಿತ್ ಅಲಿಖಾನರ ಭಾವಚಿತ್ರವನ್ನು ಎಂದಿನಂತೆ ರೇಷ್ಮೆ ಬಟ್ಟೆಯಿಂದ ಒರೆಸಿ, ಕೈ ಮುಗಿದು ತಂಬೂರಿ ಕೈಯಲ್ಲಿ ಹಿಡಿದು ಕುಳಿತಳು. ಮನದಲ್ಲಿ ಗುರುಗಳ ಕಂಠವನ್ನು ಆಹ್ವಾನಿಸಿಕೊಂಡು ತದೇಕಚಿತ್ತಳಾಗಿ ಉಸಿರು ಬಿಗಿ ಹಿಡಿದು ಸುಮ್ಮನೆ ಧ್ಯಾನಿಸಿದಳು. ಬೆರಳುಗಳು ಮಿಸುಕಲಿಲ್ಲ. ತಂತಿಯನ್ನು ಮೀಟಲಿಲ್ಲ. ಗಂಟಲಿನಿಂದ ಧ್ವನಿ ಹೊರಡಲಿಲ್ಲ. ಯಾರೋ ಬೆರಳನ್ನು ಕತ್ತರಿಸಿ, ಗಂಟಲ ಮೇಲೆ ಕುಳಿತಂತಾಯಿತು. ಉಸಿರುಗಟ್ಟಿದಂತಾಗಿ ಬಿಸಿಯುಸಿರು ಹೊರಬರುತಿತ್ತು. 'ನಿನ್ನ ರಕ್ತ ಮಲಿನವಾಗಿದೆ, ಉಸಿರು ಕೊಳಕಾಗಿದೆ. ನಮ್ಮ ಗುರುಗಳು ಹೇಳಿದಂತೆಯೇ ಆಯಿತು ಗಯ್ಯಾಳಿ. ನಿಮ್ಮಂತವರ ದೇಹ ಕತ್ತರಿಸಿ ನರಿ ನಾಯಿಗಳಿಗೆ ಹಾಕಬೇಕು ಪಾಪಿ' ಎಂಬ ಧ್ವನಿ ಕಿವಿಯಲ್ಲಿ ಗುಂಗುಡಿಸುತಿತ್ತು.

ದೇಹವನ್ನು ಮುಳ್ಳಿನಂತೆ ಅಡರಿಕೊಂಡು, ತುಟಿಗಳನ್ನು ಒತ್ತಿ ಹಿಡಿದು ಉಸಿರಾಡಲು ಬರದಂತೆ ಹಲ್ಲುಗಳಿಂದ ಕಚ್ಚಿ 'ನನಗೆ ಮೋಸ ಮಾಡಿದಿ' ಎಂದು ದೇಹವನ್ನು ಹಿಂಡಿ ಹಿಂಡಿ, ಅವನೆ ಪ್ರೀತಿಯಿಂದ ತೊಡಿಸಿದ ಹಸಿರು ಬಳೆಗಳನ್ನು ಚೂರು ಚೂರು ಮಾಡಿ ಕೈಗಳಿಗೆ ಗಾಯ ಮಾಡಿದ್ದ. ತುಟಿಗಳು ಸೀಳಿ ರಕ್ತ ಒಸರುತಿತ್ತು. ಮೂಗು, ಕೆನ್ನೆ ಊದಿಕೊಂಡಿದ್ದವು. ಕುತ್ತಿಗೆ ಸುತ್ತ ಹಲ್ಲಿನಿಂದ ಕಡಿದ ಸಣ್ಣ ಸಣ್ಣ ಗಾಯಗಳಾಗಿದ್ದವು. ತಂತಿ ನುಡಿಸಬೇಕಾದ ಬೆರಳುಗಳಿಂದ ಗಾಯಗಳನ್ನು ಒಂದೊಂದೆ ಮುಟ್ಟಿಕೊಂಡಳು. ನರಮಂಡಲಕ್ಕೆ ಬೆಂಕಿ ಹೊತ್ತಿಕೊಂಡಷ್ಟು ಯಾತನೆಯಾಯಿತು. ದೇಹದ ಮೇಲೆ ಕೆಂಡ ಚೆಲ್ಲಿದಂತಾಯಿತು. 'ನನ್ನ ಕಾಯದ ಮೇಲೆ ಮಾಡಿದ ಗಾಯಗಳಿಂದ ಅವನಿಗೆ ಅದ್ಯಾವ ಸುಖ ಸಿಕ್ಕಿತೋ, ಅವನ ಒಳಗಿನ ವೇದನೆ ಉರಿದು ಹೋಯಿತೋ, ಅನುಮಾನದ ವಿಷವೃಕ್ಷ ಅವನೊಳಗೆ ಬೆಳೆದು ಹೋಯಿತೇ... ಈ ಬೇಗುದಿಯನ್ನು ಯಾರಿಗೆ ಉಸುರುವುದು? ಕಾರ್ಕೋಟ ತುಂಬಿದ ಹುತ್ತಗಳು ಮನೆಯಲ್ಲಿ ಹುಟ್ಟಿದರೆ ಎಲ್ಲಿಯ ನೆಲೆ? ದೇವರೇ, ಒಮ್ಮೆ ದಯ ತೋರಿ ವಿಷವೃಕ್ಷವನ್ನು ಸಂಜೀವಿನಿಯಿಂದ ತೊಳೆಯಬಾರದೆ? ಕತ್ತರಿಸಿ ತುಂಡು ತುಂಡಾಗುತ್ತಿರುವ ಮನಸ್ಸನ್ನು ಮತ್ತೆಂದೂ ಹರಿಯದಂತೆ ಪ್ರೀತಿಯ ಸೂಜಿ ದಾರದಿಂದ ಹೊಲಿಯಬಾರದೆ? ಅವನ ಹೃದಯ ಹೊಕ್ಕ ಕೇಡಿನ ಜಂತುವನ್ನು ಕೊಲ್ಲಬಾರದೆ? ಅಥವಾ ಈ ದೇಹವನ್ನೇ ಸುಟ್ಟು ಭಸ್ಮ ಮಾಡಬಾರದೇ... ಕಲುಷಿತಗೊಳ್ಳುತ್ತಿರುವ ಅವನ ಹೃದಯವನ್ನು ಯಾವ ಪವಿತ್ರ ಜಲದಿಂದ ತೊಳೆಯುವುದು. ಗುರುವೇ ನೀವೆ ದಾರಿ ತೋರಿಸಿ' ಎಂದು ಪಂಡಿತ್ ಅಲಿಖಾನ್‌ರ ಫೋಟೋವನ್ನು ಕಣ್ಣಿಗೆ ಒತ್ತಿಕೊಂಡಳು. ಗುರುಗಳ ಫೋಟೊ ಕಣ್ಣೀರಿನಿಂದ ತೊಯ್ದು ಹೋಯಿತು. ತನ್ನ ಮನಸ್ಸನ್ನು ತಹ ಬಂದಿಗೆ ತಂದುಕೊಂಡು, ಸಂತೈಸಿಕೊಳ್ಳಲು ಹರಸಾಹಸ ಮಾಡಿದಳು.

ಎಷ್ಟೇ ಸಮಾಧಾನ ತಂದುಕೊಂಡರೂ ಮನಸ್ಸು ಶಾಂತ ಸ್ಥಿತಿಗೆ ಬರಲಿಲ್ಲ. ಮಲಗಿದ ಮಗಳ ಉಸಿರು ಲಾಲಿಯಂತೆ ಕೇಳಿಸುತ್ತಿತ್ತು. ಎದ್ದು ಮಗಳ ಮೃದುವಾದ ದವಡೆಗೆ ತಟ್ಟಿತೋ ಇಲ್ಲವೋ ಅನ್ನುವ ರೀತಿಯಲ್ಲಿ ನವಿರಾದ ಮುತ್ತು ಕೊಟ್ಟಳು. ಮಗಳ ಉದ್ದ ಮೂಗು, ಸಣ್ಣ ಕಣ್ಣುಗಳು, ಚಿಗುರಿನಂಥ ತುಟಿಗಳು, ರೇಷ್ಮೆಯಂತಹ ಕೂದಲುಗಳನ್ನು ಮೆಲ್ಲನೆ ತಟ್ಟಿದಳು. ಮಗಳ ಸ್ಪರ್ಶ ಮುದ ನೀಡಿತು. ಮನಸ್ಸಿಗೆ ಏನೋ ಅನುಭೂತಿ ಅನಿಸಿತು. ಮಗಳು ತಿಳಿನೀರಿನಂತೆ ನಕ್ಕು 'ಅಮ್ಮಾ...' ಎಂದು ಮುಖ ಹೊರಳಿಸಿದಳು. ಆ ನಗುವು ಮೈ ಮನಗಳಿಗೆ ದಿವ್ಯಾಮೃತವನ್ನೇ ನೀಡಿತು. ಗುರುವಿನ ಗಾಯನದ ಧ್ವನಿ ಮಗಳ ನಗುವಿನ ರೂಪದಲ್ಲಿ ಹರಿದು ಬಂದಿತೋ... ಗಂಟಲು, ಬೆರಳುಗಳಿಗೆ ಕಸುವು ತಂದಿತು. ಕ್ಷಣ ಗಾಯಗಳನ್ನು ಮರೆತು ದೇಹವನ್ನು ಹುರಿಗೊಳಿಸಿ ಮತ್ತೆ ತಂಬೂರಿ ಹಿಡಿದು ಕುಳಿತಳು. ಗಂಟಲಿಂದ ಧ್ವನಿ ಲೀಲಾಜಾಲವಾಗಿ ಹೊರಟಿತು. ಬೆರಳುಗಳು ತಂತಿಯನ್ನು ಸ್ಪರ್ಶಿಸಿ ನಾದ ಸಿರಿಯನ್ನು ಕೋಣೆ ತುಂಬಿಸಿತು.

